ಒ.ಎಸ್ **154/2025**
ಪಿಡಬ್ಲ್ಯೂ: **1**

**ದಿನಾಂಕ 04.03.2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ: ಶ್ರೀ ಸಿ.ಪಿ ರವರಿಂದ:

**1.** ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಷಯ ಸತ್ಯವಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾನು ಸ್ವತಃ ವಕೀಲರಿಗೆ ನೀಡಿರುತ್ತೇನೆ. ಅದನ್ನು ನನ್ನ ಸಾಕ್ಷ್ಯ ಎಂದು ಪರಿಗಣಿಸಲು ಕೋರುತ್ತೇನೆ.

**2.** ಕೆನರಾ ಬ್ಯಾಂಕ್ ನವರು ನನಗೆ ನೀಡಿರುವ ಲೆಟರ್ ಆಫ್ ಆಥಾರಿಟಿಯ ದೃಢೀಕೃತ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಯನ್ನು ನಿಪಿ-**1** ಎಂದು ಗುರುತಿಸಲಾಯಿತು. ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಯನ್ನು ನಿಪಿ-**2** ಎಂದು ಗುರುತಿಸಲಾಯಿತು. ಚಿಕ್ಕನೂರು ಗ್ರಾಮ, ಮುತ್ತೂರು ಹೋಬಳಿ, ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಸರ್ವೆ ನಂಬರ್ **49** ಮತ್ತು **50**ರ ಪಹಣಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಗಳನ್ನು ನಿಪಿ-**2** ಮತ್ತು ನಿಪಿ- **3** ಎಂದು ಗುರುತಿಸಲಾಯಿತು. ದಿನಾಂಕ **15.10.2009, 09.03.2011, 25.09.2013, 19.02.2016, 26.12.2018, 19.07.2021** ಮತ್ತು **19.07.2021**ರ **letter of reviewal** ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-**4** ರಿಂದ **10** ಎಂದು ಗುರುತಿಸಲಾಯಿತು. ದಿನಾಂಕ **18.07.2024**ರ **Acknowledgement of Debt** ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಯನ್ನು ನಿಪಿ-**11** ಎಂದು ಗುರುತಿಸಲಾಯಿತು. **Loan account extract** ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತಿದ್ದು ಸದರಿ ದಾಖಲೆಯನ್ನು ನಿಪಿ-**12** ಎಂದು ಗುರುತಿಸಲಾಯಿತು.

ಮುಂದುವರೆದ ವಾದಿ ಪರ ಮುಖ್ಯ ವಿಚರಾರಣೆಗೆ ವಾದಿ ಪರ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ. ಹೇ. ಕೇ. ಸ. ಇದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ